ಓ.ಎಸ್.ನಂಃ 262/2017

ಡಿಡಬ್ಲ್ಯೂ-1

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 27.04.2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 5ನೇ ಪ್ರತಿವಾದಿ ಪರ ವಕೀಲರಿಂದಃ**

ವಾದಿ ನನ್ನ ಚಿಕ್ಕಪ್ಪ. ಮಲ್ಲಪ್ಪ ನನ್ನ ತಾತ. ನನ್ನ ಅಜ್ಜಿ ನಾಗಮ್ಮ. ಮಲ್ಲಪ್ಪ ಮತ್ತು ನಾಗಮ್ಮರವರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ನಾಗಮ್ಮ ನನ್ನ ತಂದೆ ಮತ್ತು ಚಿಕ್ಕಮಾದಮ್ಮ(ವಾದಿ) ಎಂದರೆ ಸರಿ. ನನ್ನ ಅತ್ತೆ ನಾಗಮ್ಮರವರಿಗೆ 6 ಜನ ಮಕ್ಕಳು. ನನ್ನ ತಾತ ಮಲ್ಲಪ್ಪ ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಮೂಲತಃ ದಾವಾ ಸ್ವತ್ತು ನನ್ನ ತಾತ ಮಲ್ಲಪ್ಪನ ಹೆಸರಿನಲ್ಲಿ ಇತ್ತು ಆತ ಮರಣ ಹೊಂದಿದ ನಂತರ ನನ್ನ ಅಜ್ಜಿ ನಾಗಮ್ಮರವರ ಹೆಸರಿಗೆ ಪೌತಿ ಖಾತಾ ಆಯಿತು ಎಂದರೆ ಸರಿ. ದಾವಾ ಸ್ವತ್ತು ನನ್ನ ತಂದೆ, ಚಿಕ್ಕಪ್ಪ ಮತ್ತು ಚಿಕ್ಕಮ್ಮನಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಮತ್ತು ತಾಯಿಗೆ ಮಾತ್ರ ಸೇರಿದ್ದು ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುವ ಕಾರಣ ನನ್ನ ಅಜ್ಜಿಗೆ ವಿಲ್ ಬರೆಯುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಅಜ್ಜಿಯ ಸ್ವಯಾರ್ಜಿತ ಸ್ವತ್ತಲ್ಲ ಎಂದರೆ ಸರಿ. ದಾವಾ ಸ್ವತ್ತು ಇಂದಿಗೂ ಸಹ ಭಾಗವಾಗಿಲ್ಲ ಎಂದರೆ ಸರಿಯಲ್ಲ. 25 ವರ್ಷಗಳ ಹಿಂದೆ ದಾವಾ ಸ್ವತ್ತು ವಿಭಾಗವಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತು ನಾಗಮ್ಮ, ದೊಡ್ಡಮಾದಪ್ಪ ಮತ್ತು ಚಿಕ್ಕಮಾದಪ್ಪರವರ ನಡುವೆ ವಿಭಾಗವಾಗಿತ್ತು. ಸದರಿ ವಿಭಾಗ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಆಗಿರುತ್ತದೆ. ಸದರಿ ಸ್ವತ್ತು ನಾನು ಹೇಳಿದಂತೆ ವಿಭಾಗವಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಅಂದರೆ 5ನೇ ಪ್ರತಿವಾದಿಗೆ ನಾವು ವಿಭಾಗಾಂಶ ನೀಡಿಲ್ಲ. 5ನೇ ಪ್ರತಿವಾದಿಗೆ ನಾವು ಯಾವುದೆ ವಿಭಾಗಾಂಶ ನೀಡದ ಕಾರಣ ದಾವಾ ಸ್ವತ್ತಿನಲ್ಲಿ ಆಕೆ 3/1 ಭಾಗಕ್ಕೆ ಅರ್ಹಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಆದ ಕಾರಣ 5ನೇ ಪ್ರತಿವಾದಿಗೆ ಸಮಾನ ಹಿಸ್ಸೆ ಇದೆ ಎಂದರೆ ಸರಿಯಲ್ಲ.

ವಿಲ್ ಬರೆಯುವ ಕಾಲಕ್ಕೆ ನನ್ನ ಅಜ್ಜಿಗೆ 75 ವರ್ಷವಾಗಿರಬಹುದು. ವಿಲ್ ಬರೆಯುವ ಕಾಲಕ್ಕೆ ನನ್ನ ಅಜ್ಜಿಗೆ ಆರೋಗ್ಯದ ಸಮಸ್ಯೆ ಇತ್ತು ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಓಡಾಡಲು ಮತ್ತೊಬ್ಬರ ಸಹಾಯ ಬೇಕಿತ್ತು ಎಂದರೆ ಸರಿಯಲ್ಲ. 25 ವರ್ಷಗಳ ಕಾಲ ನಮ್ಮ ಅಜ್ಜಿ ನಮ್ಮ ಜೊತೆಯಲ್ಲಿ ಇದ್ದರು. ಅದನ್ನು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ನಮ್ಮ ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಾನು ಯಾವುದೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮರಣ ಹೊಂದಿದಾಗ ನನ್ನ ತಂದೆ ಬದುಕಿದ್ದರು. ನನ್ನ ಅಜ್ಜಿಯ ಉತ್ತಾರಾಧಿಕ್ರಿಯೆಯನ್ನು ನನ್ನ ತಂದೆ, ಚಿಕ್ಕಪ್ಪ ಮತ್ತು ನನ್ನ ಅತ್ತೆ ಎಲ್ಲರು ಸೇರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಲ್ ಬರೆದಿದ್ದಾರೆ ಎಂದು ನಾನು ಪ್ರೊಬೇಟ್ ಗಾಗಿ ಅರ್ಜಿ ಹಾಕಿದ್ದೆ ಎಂದರೆ ಸರಿ. ನಿಪಿ6 ರಂತೆ ಪತ್ರಿಕಾ ಪ್ರಕಟಣೆ ಹೊರಡಿಸಿದ್ದೆ ಎಂದರೆ ಸರಿ. ನಿಡಿ6 ರ ಸರ್ವೇ ನಂಬರ್ ಬೇರೆ ಮತ್ತು ದಾವಾ ಸ್ವತ್ತಿನ ಸರ್ವೇ ನಂಬರ್ ಬೇರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತಾದ ಕಾರಣ 5ನೇ ಪ್ರತಿವಾದಿಗೆ ಸಮಾನ ಹಿಸ್ಸೆ ಇದೆ ಎಂದರೆ ಸರಿಯಲ್ಲ. ನಾವು ಬರೆಸಿಕೊಂಡಿರುವ ವಿಲ್ 5ನೇ ಪ್ರತಿವಾದಿಯ ಹಕ್ಕಿಗೆ ಬಂಧನಕಾರ್ಯವಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ